897 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿರುವ ವಿದ್ಯುತ್ ಉತ್ಪಾದನಾ ಘಟಕಗಳು ಎಷ್ಟು; ಅವುಗಳು ಉತ್ಪಾದಿಸುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು; (ವಿವರ ನೀಡುವುದು)

ಆ) ಸದರಿ ವಿದ್ಯುತ್ ಘಟಕಗಳು ಉತ್ಪಾದಿಸುವ ವಿದ್ಯುತ್‌ನ ಬಳಕೆಯನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆಯೇ; (ಪೂರ್ಣ ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ 29 ಸಕ್ಕರೆ ಕಾರ್ಖಾನೆಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳು ಇವೆ. ಈ ಘಟಕಗಳು ಉತ್ಪಾದಿಸುವ 849.36 ಮಿಲಿಯನ್ ಯೂನಿಟ್‌ನ್ನು ಖರೀದಿ ಮಾಡಲಾಗಿದೆ.

ಆ) ದಿನಾಂಕ 31.3.2009ರ ತನಕ ಸಹ ವಿದ್ಯುತ್ ಘಟಕಗಳಿಂದ ವಿದ್ಯುತ್ ಜಾಲಕ್ಕೆ 466.57 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಲಭ್ಯವಿದ್ದು ಅದರಲ್ಲಿ 210.85 ಮೆ.ವ್ಯಾ. (45%) ರಷ್ಟು ರಾಜ್ಯದ ಜಾಲ ಹಾಗೂ ಉಳಿದ ಸಾಮರ್ಥ್ಯವನ್ನು ಹೊರ ರಾಜ್ಯದ ವಿದ್ಯುತ್ ಜಾಲಕ್ಕೆ ಪೂರೈಸಲಾಗಿದೆ. ಆದರೂ ಡಿಸೆಂಬರ್ 2008 ರಿಂದ ಮೇ 2009ರ ಅವಧಿಗೆ ರಾಜ್ಯದ ಎಲ್ಲಾ ಸಹ ವಿದ್ಯುತ್ ಘಟಕಗಳು ರಾಜ್ಯದ ವಿದ್ಯುತ್ ಜಾಲಕ್ಕೆ ವಿದ್ಯುತ್ತನ್ನು ಯೂನಿಟ್ 1ಕ್ಕೆ ರೂ. 7.25ರಂತೆ ಡಿಸೆಂಬರ್ 2008ರ ಮಾಹೆಗೆ ಮತ್ತು ರೂ. 6.50ರಂತೆ ಜನವರಿ 2009 ರಿಂದ ಮೇ 2009ರವರೆಗೆ ಸರ್ಕಾರದ ಆದೇಶದ ದಿನಾಂಕ 17.12.2008 ಮತ್ತು 27.1.2009ರ ಮೇರೆಗೆ ಪೂರೈಸಿರುತ್ತವೆ.